ವಿದ್ಯುತ್ ಸರಬರಾಜು ಮಾಡಲು ಹೊಸದಾಗಿ ೫೨ ಕೆ.ವಿ. ಲೈನು ಹಾಕಲಾಗಿದ್ದು ಅದನ್ನು ಸರ್ಕಾರದ ಮುಖ್ಯ ವಿದ್ಯುತ್ ಪರೀಕ್ಷಕರು ಪರೀಕ್ಷಿಸಿ ಕೆಲವು ನ್ಯೂನತೆಗಳನ್ನು ಗುರ್ತಿಸಿದ್ದು ಆ ನ್ಯೂನತೆಗಳನ್ನು ಈಗ ಸರಿಪಡಿಸಲಾಗಿದೆ. ಈ ಹೊಸ ವಿದ್ಯುತ್ ಮಾರ್ಗವನ್ನು ಇನ್ನೂ ಒಂದು ವಾರದೊಳಗೆ ಕಾರ್ಯ ನಿರತ ಮಾಡಲು ಕ್ರಮ ಕೈಗೊಂಡಿದೆ. ಇದಾದನಂತರ ಬಂಟ್ವಾಳ ತಾಲ್ಲೂಕಿನ ವಿದ್ಯುತ್‌ನ ಸರಬರಾಜಿನಲ್ಲಿ ಸುಧಾರಣೆ ಆಗುತ್ತದೆ.

೫ ಮಂಗಳೂರಿನಲ್ಲಿ ವಿದ್ಯುತ್ ವೋಲ್ಟೇಜಿನ ಏರಿಳಿತವನ್ನು ಸರಿಪಡಿಸಲು ಒತ್ತಾಯ

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಮಂಗಳೂರು).—ಮಾನ್ಯ ಅಧ್ಯಕ್ಷರೇ. ಮಂಗಳೂರಿನಲ್ಲಿ ವಿದ್ಯುತ್ ಅವ್ಯವಸ್ಥೆ, ವೋಲ್ಟೇಜ್ ಏರಿಳಿತ, ಪೂರೈಕೆಯಲ್ಲಿ ಕಣ್ಣುಮುಚ್ಚಾಲೆ, ಇದರಿಂದ ಮನೆ ಮಂದಿ ಗೆಲ್ಲಾ ತೊಂದರೆ. ನೇತ್ರಾವತಿ ನದಿಯಲ್ಲಿ ನೀರಿಗೆ, ಪಂಪಿಗೆ ಪವರ್ ಇಲ್ಲ. ಹಂಗಾಗಿ ನೀರು ಪೂರೈಕೆ ಸರಿಯಾಗಿಲ್ಲ. ವಿದ್ಯುತ್ ಆಧಾರಿತ ಚಿಕ್ಕ ಉದ್ದಿಮೆಂಗಳಿಗೆ ತೊಂದರೆ. ಉತ್ಪಾದನೆ ಕಡಿತ. ಇದರಿಂದ ಪ್ರತಿದಿನ ಸಹಸ್ರಾರು ರೂಪಾಯಿಗಳ ನಷ್ಟ. ಇದು ಪರೀಕ್ಷೆಯ ಕಾಲ. ವಿದ್ಯಾರ್ಥಿಗಳು ಕಷ್ಟಪಟ್ಟು ರಾತ್ರಿ ಓದಬೇಕು. ಅವರ ಜೀವನದ ಪರೀಕ್ಷಾ ಕಾಲ. ಆದರೆ ವಿದ್ಯಾರ್ಥಿಗಳನ್ನು ವಿದ್ಯುತ್ ಇಲ್ಲದೆ ಪರೀಕ್ಷೆ ಮಾಡುತ್ತಿದೆ. ಮೇಣದ ಬತ್ತಿಯ ಬೆಳಕಿನಲ್ಲಿ ಓದಿ ವಿದ್ಯಾರ್ಥಿಗಳ ಕಣ್ಣು ಕೂಡ ಹಾನಿ. ಬಾಳಿಗೂ ಹಾನಿ. ಒಟ್ಟಾರೆ ಮಂಗಳೂರಿನಲ್ಲಿ ವಿದ್ಯುತ್ ಇಲಾಖೆಯ ಮೇಲೆ ಮನೆ ಮಂದಿಯೆಲ್ಲಾ ಹಾಕುತ್ತಿದ್ದಾರೆ ಶಾಪ, ಜನಕ್ಕೆಲ್ಲಾ ಕೋಪ, ಕರೆಂಟಿನ ತಾಪತ್ರಯದಿಂದ ಬದುಕಿಗೇ ತಾಪ. ಈ ವ್ಯವಸ್ಥೆಯನ್ನು ಕೂಡಲೇ ಸರಿಪಡಿಸಿ ಎಂದು ಅನುತಾಪದಿಂದ ಒತ್ತಾಯಿಸುತ್ತಿದ್ದೇನೆ. ಈ ವಿಚಾರದಲ್ಲಿ ಒಂದೆರಡು ತಿಂಗಳ ಹಿಂದೆ ಸಚಿವರಿಗೆ ತಾರು ಕೊಟ್ಟಿದ್ದೆ. ಮಾರುತ್ತರ ಇಲ್ಲ, ಪರಿಸ್ಥಿತಿ ಹಾಗೆಯೇ ಇದೆ. ಮಂತ್ರಿಗಳು ಬದಲಾದ್ದರಿಂದ ಈ ವ್ಯವಸ್ಥೆಯೂ ಬದಲಾಗಲಿ, ಕರೆಂಟಿನ ಕಣ್ಣಾಮುಚ್ಚಾಲೆ ನಿಲ್ಲಲಿ. ಜನರ ತಾಪ ಶಾಂತವಾಗಲಿ ಎಂದು ಹಾರೈಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ. (ಮಾನ್ಯ ವಿದ್ಯುತ್ ಖಾತೆ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೆ, ಮಾನ್ಯ ವಿದ್ಯುತ್ ಖಾತೆಯ ಸಚಿವರಿಗೆ ಗಂಟಲಿಗೆ ತೊಂದರೆ ಇರುವುದರಿಂದ ಅವರ ಪರವಾಗಿ ನಾನು ಈ ಹೇಳಿಕೆಯನ್ನು ಕೊಡಬಯಸುತ್ತೇನೆ.

ಮಂಗಳೂರಿಗೆ ವಿದ್ಯುತ್ ಪೂರೈಕೆ ಶಿವಮೊಗ್ಗದಿಂದ ಆಗುತ್ತಿದೆ. ಸೆಪ್ಟೆಂಬರ್ ೧೯೮೮ರಲ್ಲಿ ವಿದ್ಯುತ್ ಕಡಿತದಿಂದ ಕೆಲವು ಗ್ರಾಹಕರಿಗೆ ಪೂರ್ಣ ನಿಲ್ಲಿಸಿ, ಕೆಲವು ಹೆಚ್ ಟಿ ಗ್ರಾಹಕರಿಗೆ ಸರಬರಾಜಿನ ಪ್ರಮಾಣ ಕಡಿಮೆ ಮಾಡಲಾಯಿತು. ಮಳೆಗಾಲ ಮುಗಿದ ನಂತರ ನೀರಾವರಿ ಪಂಪುಸೆಟ್ಟುಗಳಲ್ಲಿನ ಬೇಡಿಕೆ ಗಮನಾರ್ಹವಾಗಿ ಏರಿತು. ಗ್ರಾಹಕರ ಬಳಕೆಯ ಪ್ರಮಾಣ ಏರಿದ್ದರಿಂದ ಬೇಡಿಕೆಯು ಲಭ್ಯವಿರುವ ಪ್ರಮಾಣವನ್ನು ಪೀಕ್ ಲೋಡ್ ವೇಳೆಗಳಲ್ಲಿ ಮೀರಿತು. ಇದರಿಂದಾಗಿ ಹಲವಾರು ಸ್ಟೇಷನ್ನುಗಳು, ಲೈನುಗಳು, ಓವರ್‌ಲೋಡ್ ಆಗಿ ವೋಲ್ಟೇಜ್‌ನಲ್ಲಿ ಕಡಿತ ಉಂಟಾಯಿತು. ಪರಿಸ್ಥಿತಿ ಸುಧಾರಿಸಲು ಗ್ರಾಮಾಂತರ ಫೀಡರ್‌ಗಳಲ್ಲಿ ಹಗಲಿನಲ್ಲಿ ೭ ಗಂಟೆಗಳ ಕಾಲ ವಿದ್ಯುತ್ ನಿಲುಗಡೆ ಮಾಡುವ ಕ್ರಮ ಜಾರಿಗೆ ತರಲಾಯಿತು. ಆದರೆ ಪಟ್ಟಣ, ನಗರಕ್ಕೆ ವಿದ್ಯುತ್ ಸರಬರಾಜು ಮಾಡುವ ಫೀಡರ್‌ಗಳಿಗೆ ಇದು ಅನ್ವಯಿಸಲಿಲ್ಲ. ಇಷ್ಟು ಕ್ರಮ ಕೈಗೊಂಡಾಗ್ಯೂ ಕೆಲವೆಡೆ ಓವರ್ ಲೋಡು ಸ್ಥಿತಿ ಉಂಟಾಗುತ್ತಿದೆ ಇದು ವಿರಳ. ಇಂಥ ಓವರ್‌ಲೋಡು ಪರಿಸ್ಥಿತಿ ಉಂಟಾದಾಗ ಪಟ್ಟಣ ನಗರ ಪ್ರದೇಶಗಳಿಗೂ ಅನಿಯಮಿತ ವಿದ್ಯುತ್ ನಿಲುಗಡೆ ಮತ್ತು ಕನಿಷ್ಠ ವೋಲ್ಟೇಜ್ ಮಾಡಲಾಗುತ್ತದೆ. ಇದನ್ನು ತುಂಬಾ ಅನಿವಾರ್ಯವಾದಾಗ ಮಾತ್ರ ಮಾಡಲಾಗುತ್ತದೆ. ಪರಿಸ್ಥಿತಿಯನ್ನು ಹತೋಟಿಯಲ್ಲಿಡಲು ಈ ಕ್ರಮ ಅಗತ್ಯ. ಆದ್ದರಿಂದ ಗ್ರಾಹಕರು ಮಂಡಲಿಯೊಡನೆ ಸಹಕರಿಸಬೇಕು. ಈ ಅನಿಯಮಿತ ಲೋಡ್ ಶೆಡ್ಡಿಂಗ್ ಅಗತ್ಯ ಬೀಳು ವೆಡೆಗಳಲ್ಲೆಲ್ಲಾ ಮಾಡಲಾಗುತ್ತದೆ.

೬ ರಾಜ್ಯದ ಭೂ ರಹಿತರು ಸರ್ಕಾರಿ ಭೂಮಿಯಲ್ಲಿ ಕೃಷಿ ಮಾಡುತ್ತಿದ್ದುದನ್ನು ಸಕ್ರಮಗೊಳಿಸುವುದು ಮತ್ತು ಟಿ.ಟಿ. ಮಸೂಲಿ ನಿಲುಗಡೆ

ಶ್ರೀ ಆರ್. ರಾಮಯ್ಯ.—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಸರ್ಕಾರಿ ಭೂಮಿಯಲ್ಲಿ ಭೂರಹಿತರು ಕೃಷಿ ಮಾಡುತ್ತಿದ್ದು ಇದನ್ನು ಸಕ್ರಮಗೊಳಿಸುವ ಆಲೋಚನೆ ಸರ್ಕಾರದಲ್ಲಿದ್ದು ಸಹ ಇವರಿಂದ ಟಿ.ಟಿ. ವಸೂಲು ಮಾಡುತ್ತಿರುವುದು ಯಾವ ನ್ಯಾಯ. ಈ ಹಿಂದೆ ಸರ್ಕಾರ ಇವರ ಭೂಮಿಯನ್ನು ಖಾಯಂಗೊಳಿಸುವಾಗ ಯಾವ ವಿಧದ ಕರವನ್ನು ವಿಧಿಸದೆ ಮಾಡಿಕೊಡುವ ಆಶ್ವಾಸನೆ ನೀಡಿ ಈ ರೀತಿ ನಡೆದು

ಕೊಳ್ಳುವುದು ಸರ್ವವಿಹಿತವಲ್ಲ. ಇದು ಗಾಯದಮೇಲೆ ಬರೆ ಎಳೆದಂತಾಗಿದೆ. ಇವರ ಬೇಡಿಕೆಯನ್ನಷ್ಟೆ ಗಂಟಾಗದೆ. ಕೃತಿಯಲ್ಲಿ ಬರಲಿ. ಕೂಡಲೇ ಈ ಟಿ.ಟಿ.ಯನ್ನು ನಿಲುಗಡೆ ಮಾಡಿ ಮಾತು ಉಳಿಸಿಕೊಳ್ಳಿ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಂದಾಯ ಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ತರಿಸಿಕೊಡುತ್ತೇನೆ. ಆದರೂ ಮಾನ್ಯ ಸದಸ್ಯರಾದ ರಾಮಯ್ಯನವರಿಗೆ ಹೇಳುವುದೇನೆಂದರೆ ಬಗರ್ ಹುಕ್ಕುಂ ಜಮೀನು ಮಾಡುವವರಿಂದ ಟಿ.ಟಿ. ಹಾಕಿ ವಸೂಲು ಮಾಡುವುದು ಅವರಿಗೆ ಒಳ್ಳೆಯದು. ಅವರು ಜಮೀನು ಮಾಡುತ್ತಿದ್ದರೆ ನಾಳೆ ಅದನ್ನು ತೋರಿಸಿ ಹಕ್ಕು ಮಾಡಿಕೊಳ್ಳಲು ಅನುಕೂಲವಾಗುತ್ತದೆ. ಅದು ಮಾನ್ಯ ಸದಸ್ಯರಿಗೆ ಗೊತ್ತಿದೆಯೋ ಇಲ್ಲವೋ ಕಾಣೆ.

೭) ಕಾರಂಜ ಜಲಾಶಯದ ಮುಳುಗಡೆ ಪ್ರದೇಶದಲ್ಲಿ ನೀರನ್ನು ಶೇಖರಿಸಿ ಒಂದು ಸಾವಿರ ಎಕರೆ ನೀರಾವರಿ ಮಾಡಲು ಅನುಕೂಲ ಕಲ್ಪಿಸುವುದು

SRI MOHAMAD LAIQUDDIN.—Sir, the Government has taken decision to store water of Karanja river in the submergence area of Karanja project of Bidar District from the next rainy season. No doubt the work on dam site is completed, but the work on right bank and left bank channels is still at its initial stage. The Karanja project authorities have stated that there will be storage of water to its full capacity from next rainy season. It is not possible to assess now as to what extent the rain water will be stored and how much area comes under submergence after next rainy season. So far as my knowledge goes at present there is posibility of providing irrigation facility to an area of hardly 1000 acres. I am having fear in my mind that the total area which comes under submergence is nearly 25,000 acres. on total stoppage of river water in the submergence area of the project there is no meaning for wastage of 25,000 acres (under submergence) for the sake of providing irrigation to an area of 1000 acres. I therefore urge upon the Government to store the water in the submergence area proportionately which will be sufficient for providinig irrigation facility to an area of 1000 acres only and the entire 25,000 acres should not be allowed to be submerged. The area to be submerged for cultivation 1000 acres should be found out by getting report from the project engineers and that much area alone should be allowed to be submerged during the next rainy season. The entire area of 25000 acres acquired for purposes of submergence need not be used for the next year's rainy seasons water storage. The farmers whose lands will not come under submergence in the stare of next rainy seasons water, and whose land have been acquired be allowed to cultivate their respective lands till the cannal work is completed or atleast for next Kharif and Rabi cultivation.

ಶ್ರೀ ಎ. ಲಕ್ಷ್ಮೀಸಾಗರ್.— (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) ಸನ್ಮಾನ್ಯ ಅಧ್ಯಕ್ಷರೆ. ಕಾರಂಜ ಬೃಹತ್ ನೀರಾವರಿ ಯೋಜನೆ ರಾಜ್ಯದಲ್ಲಿನ ಅತ್ಯಂತ ಕಡಿಮೆ ನೀರಾವರಿಗೊಳಗಾದ ಬೀದರ್ ಜಿಲ್ಲೆಗೆ ವರಪ್ರದಾಯವಾಗಿದೆ. ಗೋದಾವರಿ ಕೊಳ್ಳದ ಮುಖ್ಯ ನದಿಯಾದ ಮಾಂಜ್ರಾ ನದಿ ಉಪನದಿಯಾದ ಕಾರಂಜ ನದಿಗೆ ಅಡ್ಡಲಾಗಿ ಬೀದರ್ ಜಿಲ್ಲೆಯ ಬಾಲ್ಕಿ ತಾಲ್ಲೂಕಿನ ಬ್ಯಾಲಹಳ್ಳಿ ಗ್ರಾಮದ ಸೂಪ ೨೧೮ ಮಿಲಿಯನ್ ಕ್ಯೂಬಿಕ್ ಮೀಟರ್